ನಿಮ್ಮ ಮಗಳಿಗೆ ಯಾವುದರಲ್ಲಿ ಪ್ರೈಸ್ ಬಂದದ್ದು ಅಂತ ಒಂದು ಕಡೆ ಕೇಳಿ ಬಿಟ್ಟಳು. ಶಾಸ್ತ್ರೀಯ ಸಂಗೀತದಲ್ಲಿ ಎಂದು ಹೇಳಿದ ಅವರ ತಾಯಿ ಮಗಳ ಪ್ರತಿಭೆಯನ್ನು ಮನಸಾರೆ ಹೊಗಳಿದರು. 'ಅವಳು ಹಾಡಿದ್ದನ್ನು ನೀವು ಕೇಳಿದ್ದೀರಾ?' ಎಂದು ಕೇಳಿದರು. ನಾವು ಇಲ್ಲ ಎಂದು ತಲೆ ಅಲ್ಲಾಡಿಸಿದೆವು. 'ಹೇಗೂ ಊಟಕ್ಕೆ ಟೈಮ್ ಇದೆ. ಅಮ್ಮ ಬಾ ಇಲ್ಲಿ ಗೆಸ್ಟ್ ಮುಂದೆ ಹಾಡಿ ತೋರಿಸು' ಎಂದರು. ಮಗಳು ಅದಕ್ಕಾಗಿಯೇ ಕಾದಿದ್ದಳು. ಕೂಡಲೇ ಬಂದು ಶ್ರುತಿ ಬಾಕ್ಸ್ ಆನ್ ಮಾಡಿ 'ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲ ಒಂದಿದ್ದರೆ ಸಾಕೋ' ಎಂದು ಹಾಡಿಯೇ ಹಾಡಿದಳು. ಪಾಪ ಅವಳು ಕಾನ್ವೆಂಟ್ ಹುಡುಗಿ. ಕನ್ನಡವನ್ನು ಇಂಗ್ಲಿಷ್‌ನಲ್ಲಿ ಬರೆದು ಬಾಯಿ ಪಾಠ ಮಾಡಿಕೊಂಡಂಥವಳು. ಆ ಕೀರ್ತನೆಯಲ್ಲಿ ಒಂದು ಸಾಲು ಹೀಗೆ ಹಾಡಿದಳು...

'ಕರೀಮ ಕಾರಿಗೆ ಸಿಕ್ಕಿ ಮೊರೆ ಇಡುತ್ತಿರುವಾಗ
ಆದಿ ಮುಲ್ಲಾ ಎಂಬೋ ನಾಮವೇಕಾಯ್ತು'

ನಾವಿಬ್ಬರೂ ಗಂಡ ಹೆಂಡತಿ ಕನ್ನಡದ ಅಧ್ಯಾಪಕರು ಈ ವಿರೂಪ ಶಬ್ದಗಳ ವಿಕಾರ ಪ್ರಯೋಗಗಳು ನಮ್ಮನ್ನು ಗಾಬರಿಗೊಳಿಸಿದವು. ಹಾಡು ಮುಗಿದ ಮೇಲೆ ಆಕೆ ಅಪ್ಪ ಅಮ್ಮ ಖುಷಿಯಿಂದ ಚಪ್ಪಾಳೆ ತಟ್ಟಿದರು. ಕೇಳಿದ ತಪ್ಪಿಗೆ ನಾವು ತಟ್ಟಬೇಕಾಯಿತು. ಹೇಗಿತ್ತು? ಎಂದು ಕೇಳಿದರು. ಸಾಹಿತ್ಯದ ವಿರೂಪದ ಬಗ್ಗೆ ಗಮನ ಸೆಳೆಯಲು ನಾನು ಯತ್ನಿಸಿದೆ. ಅದು ಅವಳ ತಾಯಿಗೆ ಪಥ್ಯವಾಗಲಿಲ್ಲ. 'ಅಯ್ಯೋ ಬಿಡಿ. ಸಂಗೀತದಲ್ಲಿ ಇದೆಲ್ಲಾ ಮಾಮೂಲಿ. ಒಂದೆರಡು ಶಬ್ದಗಳನ್ನ ಆಚೆ ಈಚೆ ಎಳೆದು ಹಾಡಬೇಕಾಗುತ್ತದೆ. ತಾಳ ಲಯ ಪ್ರಧಾನ. ಮಿಕ್ಕಿದ್ದು ಅಷ್ಟೆಲ್ಲಾ ಇಂಪಾರ್ಟೆಂಟ್ ಅಲ್ಲ. ಅದು ಕನ್ನಡ ಅಲ್ವಾ ಹೇಗೆ ಬೇಕಾದರೂ ಪ್ರೊನೌನ್ಸ್ ಮಾಡಬಹುದು' ಎಂದರು. ಮಾತ್ರವಲ್ಲ 'ನಿಮಗೆ ಸಂಗೀತದ ರಾಗಗಳ ಬೇಸಿಕ್ ಪರಿಚಯ ಆದರೂ ಇದೆಯಾ'? ಎಂದು ನಮ್ಮನ್ನೇ ತರಾಟೆಗೆ ತೆಗೆದುಕೊಂಡರು.

ನಾನೇನೋ ಸ್ಪಷ್ಟೀಕರಣ ಕೊಡಲು ಬಾಯಿ ತೆರೆಯಬೇಕು ಎನ್ನುವಷ್ಟರಲ್ಲಿ ಹೆಂಡತಿ ಸುಮ್ಮನಿರುವಂತೆ ಕಣ್ಣುಸನ್ನೆ ಮಾಡಿದಳು.

ಮತ್ತೊಂದು ಕಡೆ ಹೋದೆವು. ನಾವು ಹೋದವರ ಮನೆಯ ಮಗಳು ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಅದ್ವಿತೀಯ ಸಾಧನೆ ಮಾಡಿದವಳಾಗಿದ್ದಳು. ಆಗಷ್ಟೇ ರಾಗಂ ತಾನಂ ಪಲ್ಲವಿ ಸ್ಪರ್ಧೆಯಲ್ಲಿ ಮೊದಲ ಬಹುಮಾನಗಳಿಸಿದ್ದಳು. ಈ ವಿಷಯ ಸಂಗೀತ ಶತ್ರುವಾದ ನನಗೆ ಗೊತ್ತಿರಲಿಲ್ಲ. ಯಥಾಪ್ರಕಾರ ಕಾಫಿ ತಿಂಡಿ ಸಮಾರಾಧನೆ ಆದ ಬಳಿಕ ಈ ಬಾರಿ ನಾನೇ ಮೇಲೆ ಬಿದ್ದು ಆ ಹುಡುಗಿಯ ತಂದೆ ತಾಯಿಯ ಹತ್ತಿರ ನಿಮ್ಮ ಮಗಳಿಗೆ ಮೊನ್ನೆ ಫಸ್ಟ್ ಪ್ರೈಸ್ ಬಂದಿತ್ತಲ್ವಾ ಆ ಹಾಡು ಸ್ವಲ್ಪ ಹಾಡಿಸಿ ಅಂತ ಕೇಳಿಕೊಂಡೆ. 'ತಡವಾಗುತ್ತದೆ ಇನ್ನೊಂದು ಮನೆಗೆ ಹೋಗಬೇಕು' ಅಂತ ಅವಳು ಪಿಸುಗುಟ್ಟಿದಳು.

'ಇರು ಐದೇ ನಿಮಿಷ ಮುಗಿದು ಹೋಗುತ್ತದೆ' ಎಂದೆ. ರಾಗಂ ತಾನಂ ಪಲ್ಲವಿ ಎಂದರೆ ತುಂಬ ಸಮಯ ಬೇಕು ಎಂದಳು. ಆಕೆ ಮತ್ತೇನೋ ಹೇಳಲು ಬಾಯಿ ತೆರೆಯಬೇಕು ಎನ್ನುವಷ್ಟರಲ್ಲಿ ಸುಮ್ಮನಿದ್ದರೆ ಸರಿ ಎಂಬಂತೆ ಕಣ್ಣು ಬಿಟ್ಟೆ. 'ಸರಿ ನಿಮ್ಮ ಹಣೆಬರಹ' ಎಂದು ಸುಮ್ಮನಾದಳು. ಆ ಹುಡುಗಿ ತಂಬೂರ ಶ್ರುತಿ ಮಾಡುವುದಕ್ಕೆ ಸುಮಾರು ಸಮಯ ತೆಗೆದುಕೊಂಡಳು. ಶ್ರುತಿ ಮಾಡುತ್ತಾ ಮಾಡುತ್ತಾ ಆಕೆ ತನ್ನ ಸ್ಥಾಯಿಯನ್ನು ಅದರೊಂದಿಗೆ ಸೇರಿಸಲು ಯತ್ನಿಸುತ್ತಿದ್ದಳು. ನಾನು ತುಂಬ ಅರ್ಥವಾದವನಂತೆ 'ವಾಹ್ ಓಹ್' ಎಂದೆ. ಒಂದೆರಡು ಬಾರಿ ಸುಮ್ಮನಿದ್ದ ಆ ಹುಡುಗಿ 'ಅಂಕಲ್ ನಾನಿನ್ನೂ ಹಾಡಲು ಶುರು ಮಾಡೇ ಇಲ್ಲ. ತಂಬೂರ ಶ್ರುತಿ ಮಾಡ್ತಾ ಇದೀನಿ. ತುಂಬಾ ಸೈಲೆನ್ಸ್ ಬೇಕು. ನೀವು ಮಾತಾಡಿದ್ರೆ ನಂಗೆ ಶ್ರುತಿ ಮಾಡಕ್ಕೆ ಆಗಲ್ಲ' ಎಂದಳು. ಅಂತೂ ಇಂತೂ ಶ್ರುತಿ ಮಾಡಿ ಹಾಡ ತೊಡಗಿದಳು. ಭರ್ಜರಿ ಒಂದು ಕಾಲು ಗಂಟೆ ರಾಗಂ ತಾನಂ ಪಲ್ಲವಿ. ಆ ಹುಡುಗಿ ಏನೋ ಸೊಗಸಾಗಿಯೇ ಹಾಡಿದಳು. ಆದರೆ ನನ್ನ ಪಾಡು ದೇವರಿಗೇ ಪ್ರೀತಿ. 'ಇದು ಎಂಥ ಮಾರಾಯ್ತೀ ಅವಸ್ಥೆ? ಎರಡು ಸಾಲನ್ನು ಮತ್ತೆ ಮತ್ತೆ ತೊಡೆ ತಟ್ಟುತ್ತಾ ತಟ್ಟುತ್ತಾ ಹಾಡ್ತಾ ಇದ್ದಾಳೆ? ಹಾಡು ಮುಂದಕ್ಕೆ ಹೋಗುವುದೇ ಇಲ್ಲವಲ್ಲ?' ಎಂದು ಪಿಸುಗುಟ್ಟಿದೆ. 'ಪಲ್ಲವಿ ಹಾಡುವುದು ಅಂದರೆ ಹೀಗೆಯೇ. ಐದು ನಿಮಿಷಕ್ಕೆಲ್ಲ ಮುಗಿಯುವುದಿಲ್ಲ. ಸುಮ್ಮನಿರಲಾರದೆ ನೀವೇ ಇರುವೆ ಬಿಟ್ಟುಕೊಂಡ್ರಿ. ಈಗ ಅನುಭವಿಸಿ' ಎಂದಳು.



ಅಲ್ಲಿಂದಾಚೆಗೆ ಆಮಂತ್ರಣ ಪತ್ರಿಕೆ ಹಂಚಿ ಮುಗಿಯುವವರೆಗೆ ಯಾರ ಮನೆಯಲ್ಲೂ ಪ್ರತಿಭಾ ಪ್ರದರ್ಶನ ವೀಕ್ಷಣೆ ಮಾಡಲಿಲ್ಲ. ಮಕ್ಕಳು ಸಾಮಾನ್ಯವಾಗಿ ಮುಗ್ಧರೇ ಆಗಿರುತ್ತಾರೆ. ಆದರೆ ಅಪ್ಪಅಮ್ಮಂದಿರಿಗೆ ತಮ್ಮ ಮಕ್ಕಳ ಪ್ರತಿಭೆ ಎಲ್ಲರಿಗೂ ತಿಳಿಯಬೇಕು ಎನ್ನುವ ಆತುರ ಕಾತುರ ಇದ್ದೇ ಇರುತ್ತದೆ. ಬಂದವರು ಮೆಚ್ಚಬೇಕು, ತಮ್ಮ ಮಕ್ಕಳ ಪ್ರತಿಭೆ ಅನಾವರಣಗೊಳ್ಳಬೇಕು ಎಂದು ಬಯಸುವವರೇ ಎಲ್ಲರೂ. ಅದು ತಪ್ಪೇನು ಅಲ್ಲ. ಆದರೆ ಬಂದವರೆಲ್ಲರೂ ಮೆಚ್ಚಲೇಬೇಕು ಎಂದು ಹೊರಟಾಗ ಸಮಸ್ಯೆ ಪ್ರಾರಂಭವಾಗುತ್ತದೆ.

ನನ್ನ ಮಿತ್ರನೊಬ್ಬನ ಮನೆಯಲ್ಲಿ ಹೀಗೆ ಆಯಿತು. ನನ್ನ ಗೆಳೆಯನೊಬ್ಬನ ಮಗ ನಟನೆಯಲ್ಲಿ ತುಂಬ ಪ್ರತಿಭಾವಂತ ಎನಿಸಿಕೊಂಡವ. ಅಲ್ಲಲ್ಲಿ ಏಕಪಾತ್ರ ಅಭಿನಯ ಹಾಗೂ ಇತರ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸುತ್ತಿದ್ದ. ಆ ಗೆಳೆಯ ತನ್ನ ಮಗನ ಪ್ರದರ್ಶನ ಇದ್ದ ಕಡೆಯೆಲ್ಲ ನನ್ನನ್ನು ಆಹ್ವಾನಿಸುತ್ತಿದ್ದ. ನನಗೆ ನೋಡಲು ಸಾಧ್ಯವಾಗುತ್ತಲೇ ಇರಲಿಲ್ಲ. ಒಂದು ಬಾರಿ ಅಚಾನಕ್ಕಾಗಿ ಅವನ ಮನೆಗೆ ಹೋಗಬೇಕಾದ ಪರಿಸ್ಥಿತಿ ಬಂತು. ನನಗೆ ತುರ್ತು ಇತ್ತು. 'ನನ್ನ ಮಗನ ಏಕಪಾತ್ರಾಭಿನಯ ನೋಡು ಅಂತ ನಿನಗೆ ತುಂಬ ಸರ್ತಿ ಹೇಳಿದ್ದೆ. ನೀನು ನೋಡಲೇ ಇಲ್ಲ ಇವತ್ತಾದರೂ ನೋಡು' ಅಂತ ಹೇಳಿದ. ನಾನು ದಾಕ್ಷಿಣ್ಯದಿಂದ ಹೂಂ ಅಂದೆ. 'ಪುಟ್ಟಾ ಬಾ..' ಎಂದು ಮಗನನ್ನು ಕರೆದ. ಆ ಹುಡುಗ ಬಭ್ರುವಾಹನ ಸಿನೆಮಾದ 'ಯಾರು ತಿಳಿಯರು ನಿನ್ನ ಭುಜಬಲದ ಪರಾಕ್ರಮ' ಪದ್ಯವನ್ನು ಸಾಭಿನಯವಾಗಿ ಮಾಡಿ ತೋರಿಸಿದ. ನನಗೆ ಖುಷಿಯಾಯಿತು. ಶಹಬ್ಬಾಸ್ ಅಂದು ಬಿಟ್ಟೆ. 'ಇನ್ನೂ ಒಂದೆರಡು ಸಾಮಾಜಿಕ ಐಟಂ ಗಳು ಇವೆ ನೋಡು ಅಂತ ಮಗನಿಗೆ ಸನ್ನೆ ಮಾಡಿದ. ಮಗ ಕೂಡಲೇ ಆರೋಪಿ ಒಬ್ಬನನ್ನು ವಿಚಾರಿಸುವ ಪೊಲೀಸ್ ಇನ್ಸ್‌ಪೆಕ್ಟರನ ಪಾತ್ರ ಮಾಡಿದ. 'ಯಾಕೋ ನೀನು ಹೀಗ್ಮಾಡಿದೆ? ಬೊಗಳೋ. ಬೊಗಳೋ.. ಸ್ಕೌಂಡ್ರಲ್!' ಅಂತ ಇನ್ಸ್‌ಪೆಕ್ಟರ್ ಕೇಳುವುದು, ಆರೋಪಿ ಹೆದರಿದಂತೆ ಮಾಡುವುದು ಹೀಗೆ ನಡೆದಿತ್ತು. ಒಂದು ಹಂತದಲ್ಲಿ ಆ ಹುಡುಗ ನಟನೆಯಲ್ಲಿ ಎಷ್ಟು ಇನ್ವಾಲ್ವ್ ಆದ ಅಂದರೆ ನನ್ನ ಕತ್ತು ಪಟ್ಟಿ ಹಿಡಿದು ನನ್ನನ್ನೇ ಒಬ್ಬ ಆರೋಪಿ ಎಂಬಂತೆ ಪರಿಗಣಿಸಿ ಕಪಾಲಕ್ಕೆ ಬಾರಿಸಿಯೇ ಬಿಟ್ಟ. ನಾನು ಕೂಗಿಕೊಳ್ಳುವಷ್ಟರಲ್ಲಿ ಇನ್ನೊಂದು ಬಿತ್ತು!.

'ಹ ಹ್ಹ ಹ್ಹಾ ಅಂತ ಅವನ ಅಪ್ಪ ಜೋರಾಗಿ ನಕ್ಕ. ಆ ಹುಡುಗ ಮಾತ್ರ ಇನ್ನೂ ನಟನೆಯ ಆವೇಶದಲ್ಲೇ ಇದ್ದ. ಹೇಗೆ? ನನ್ನ ಮಗನ ಆ್ಯಕ್ಟಿಂಗ್? ಅಂತ ಹೆಮ್ಮೆಯಿಂದ ಕೇಳಿದ. ನಾನು ದವಡೆ ಉಜ್ಜಿಕೊಳ್ಳುತ್ತ ಆ್ಯಕ್ಟಿಂಗ್ ಮನೆ ಹಾಳಾಯ್ತು. ನನ್ನ ಹಲ್ಲು ಉದುರಿಸ್ತಾ ಇದ್ದ ಮಾರಾಯ' ಅಂದೆ